ಶ್ರೀ ಬಸವರಾಜ್.—ದಂಡ ವಿಧಿಸುತ್ತೇವೆಂದು ಹೇಳಿ ಬಡವರಿಗೆ ಟಿ.ಟಿ.ಫೈನ್ ಏನು ಹಾಕುತ್ತೀರಿ ಆದು ಬಡವರಿಗೆ ಚಾಸ್ತಿಯಾಗುತ್ತದೆ. ಅದನ್ನು ಕಡಿಮೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಅದನ್ನು ಪರಿಶೀಲನೆ ಮಾಡೋಣ.

ಕೊಳ್ಳೇಗಾಲ ತಾಲ್ಲೂಕಿನಲ್ಲಿರುವ ಮಹದೇಶ್ವರಸ್ವಾಮಿ ದೇವಸ್ಥಾನದ ಬಗ್ಗೆ

೮೦ (೧೨೫) ಶ್ರೀ ಜಿ. ರಾಜುಗೌಡ (ಹನೂರ್).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿರುವ ಮಹದೇಶ್ವರಸ್ವಾಮಿ ದೇವಸ್ಥಾನದ ಹಣದಲ್ಲಿ ೧೯೪೪ರಿಂದ ಇಲ್ಲಿಯವರೆಗೆ ಯಾವ ಯಾವ ದೇವಸ್ಥಾನಗಳ ಜೀರ್ಣೋದ್ಧಾರ ಕ್ಕಾಗಿ ಎಷ್ಟೆಷ್ಟು ಹಣವನ್ನು ಮಂಜೂರು ಮಾಡಲಾಗಿದೆ?

ಆ) ಕೊಳ್ಳೇಗಾಲ ತಾಲ್ಲೂಕಿನಲ್ಲಿ ಎಷ್ಟು ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಹಣ ಬಿಡುಗಡೆ ಮಾಡಲಾಗಿದೆ?

ಇ) ದೇವಸ್ಥಾನದ ವಾರ್ಷಿಕ ಆಯವ್ಯಯ ಪತ್ರದಲ್ಲಿ ಈ ಕಾರ್ಯಕ್ಕಾಗಿ ಹಣ ಮೀಸಲಾಗಿರುವ ಪದ್ಧತಿ ಇದೆಯೇ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ೧೯೪೪-೪೫ ರಿಂದ ೩೦-೬-೧೯೪೬ರವರೆಗೆ ರಾಯಚೂರು ಜಿಲ್ಲೆಯ ಈ ಕೆಳಗೆ ಕಾಣಿಸಿರುವ ದೇವಾಲಯಗಳಿಗೆ ಒಟ್ಟು ೪೫,೦೦೦-೦೦ ರೂ.ಗಳನ್ನು ಮಂಜೂರು ಮಾಡಲಾಗಿದೆ.

೧.	ಶ್ರೀ ವೀರಭದ್ರೇಶ್ವರ ದೇವಸ್ಥಾನ, ಯರದೋಣಿಗ್ರಾಮ ಲಿಂಗಸೂರು ತಾಲ್ಲೂಕು.	ರೂ. ೧೫,೦೦೦-೦೦
೨.	ಶ್ರೀ ಅಮರೇಶ್ವರ ದೇವಸ್ಥಾನ, ದೇವರಬಾಪು ಗ್ರಾಮ, ಲಿಂಗಸೂರ್ ತಾಲ್ಲೂಕು.	ರೂ. ೧೫,೦೦೦-೦೦
೪.	ಶ್ರೀ ರಾಮಲಿಂಗೇಶ್ವರ ದೇವಸ್ಥಾನ, ರಾಮತೀರ್ಥ, ಹೊನ್ನಾಳಿ ಗ್ರಾಮ	ರೂ. ೧೫,೦೦೦-೦೦

ಆ) ಈ ದೇವಸ್ಥಾನದ ನಿಧಿಯಿಂದ ಕೊಳ್ಳೇಗಾಲ ತಾಲ್ಲೂಕಿನ ಯಾವ ದೇವಸ್ಥಾನಕ್ಕೂ ಹಣ ಬಿಡುಗಡೆ ಮಾಡಿರುವುದಿಲ್ಲ.

ಇ) ೧೯೪೪-೪೫ನೇ ಸಾಲಿನಿಂದ ಈಚೆಗೆ ಈ ರೀತಿ ಹಣ ಮೀಸಲಿಡಲಾಗುತ್ತಿದೆ.

ಶ್ರೀ ಜಿ. ರಾಜೂಗೌಡ.—೧೯೪೪-೪೫ರಲ್ಲಿ ಎಷ್ಟು ಹಣವನ್ನು ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ಮೀಸಲಿಡಲಾಗಿದೆ? ೧೯೪೪-೪೫ರಲ್ಲಿ ಮಹದೇಶ್ವರಸ್ವಾಮಿ ದೇವಸ್ಥಾನದ ವಾರ್ಷಿಕ ಆಯವ್ಯಯ ಪತ್ರದಲ್ಲಿ ಮೈಸೂರು ಜಿಲ್ಲೆಯ ಎಷ್ಟು ದೇವಸ್ಥಾನಗಳಿಗೆ ಜೀರ್ಣೋದ್ಧಾರಕ್ಕಾಗಿ ಹಣವನ್ನು ಬಿಡುಗಡೆ ಮಾಡಲಾಗಿದೆ? ಧರ್ಮದರ್ಶಿಗಳ ಸಭೆಯಲ್ಲಿ ಈ ಹಣವನ್ನು ಬಿಡುಗಡೆ ಮಾಡಲಿಕ್ಕೆ ನಿರ್ಣಯವಾಗಿದ್ದೆಯೇ?

ಶ್ರೀ ಎಸ್.ಆರ್. ಬೊಮ್ಮಾಯಿ.—ಆ ವಿವರಗಳು ನನ್ನ ಹತ್ತಿರ ಇಲ್ಲ.

ಶ್ರೀ ಜಿ. ರಾಜುಗೌಡ.—ಮೈಸೂರು ಜಿಲ್ಲೆಯ ದೇವಸ್ಥಾನಗಳಿಗೆ ಹಣವನ್ನು ಕೊಡದೆ, ರಾಯಚೂರು ಜಿಲ್ಲೆಯ ದೇವಸ್ಥಾನಗಳಿಗೆ ಕೊಟ್ಟಿದ್ದೇವೆಂದು ಹೇಳಿ ಹಣವನ್ನು ದುರುಪಯೋಗ ಮಾಡಿದ್ದಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮದ್ರಾಸ್ ಎಂಡೋಮೆಂಟ್ ಆಕ್ಟ್ ಪ್ರಕಾರ ಚೆನ್ನಾಗಿ ನಡೆಯತಕ್ಕ ದೇವಾಲಯಗಳಿಂದ ಬೇರೆ ದೇವಾಲಯಗಳಿಗೆ ಜೀರ್ಣೋದ್ಧಾರಕ್ಕಾಗಿ ಹಣವನ್ನು ಕೊಡ ಬಹುದು. ಆ ಪ್ರಕಾರ ರಾಯಚೂರು ಜಿಲ್ಲೆಯ ದೇವಾಲಯಗಳಿಗೆ ಹಣವನ್ನು ಕೊಟ್ಟಿದ್ದಾರೆ.

ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿರತಕ್ಕ ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ಹಣವನ್ನು ಕೊಡುವುದು ಸೂಕ್ತ.

ಶ್ರೀ ಜಿ. ರಾಜುಗೌಡ.—ರಾಯಚೂರು ಜಿಲ್ಲೆಯ ದೇವಾಲಯಗಳಿಗೆ ೪೫ ಸಾವಿರ ರೂಪಾಯಿ ಏನು ಕೊಟ್ಟಿದ್ದೀರೆಂದು ಹೇಳಿದ್ದಾರೆ ಅದರಲ್ಲಿ ಶ್ರೀ ರಾಮಲಿಂಗೇಶ್ವರ ದೇವಸ್ಥಾನ, ರಾಮತೀರ್ಥ ಹೊನ್ನಾಳಿ ಗ್ರಾಮ, ರಾಯಚೂರು ಜಿಲ್ಲೆ ಏನಿದೆ ಅಲ್ಲಿಗೆ ಒಂದು ರೂಪಾಯಿ ಕೂಡ ಕೊಟ್ಟಿಲ್ಲ. ಇದು ಧರ್ಮದರ್ಶಿಗಳಿಗೆ ಗೊತ್ತೇ ಇಲ್ಲ. ಒಟ್ಟಿನಲ್ಲಿ ೪೫ ಸಾವಿರ ರೂಪಾಯಿ ಅಪವ್ಯಯವಾಗಿದೆ. ದಯವಿಟ್ಟು ಮಾನ್ಯಮಂತ್ರಿಗಳು ಪರಿಶೀಲನೆ ಮಾಡಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು.—ಗೈರು ಹಾಜರಾದ ಸದಸ್ಯರ ಹೆಸರುಗಳನ್ನು ಮತ್ತೊಮ್ಮೆ ಕರೆಯುತ್ತೇನೆ. ಶ್ರೀ ಮಾಲೀಕಯ್ಯ, ವಿ. ಗುತ್ತೇದಾರ್, ಶ್ರೀ ಬಾಬುರೆಡ್ಡಿ ವಿ. ತುಂಗಳ್ ಹಾಗೂ ಶ್ರೀ ಯು. ಭೂಪತಿ ಸದಸ್ಯರುಗಳು ಬಂದಿಲ್ಲ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಅಫಜಲ್‌ಪುರ ತಾಲ್ಲೂಕಿನಲ್ಲಿ ಬರ ಕಾಮಗಾರಿಗಳನ್ನು ಪ್ರಾರಂಭಿಸಿರುವುದು

೬೪(೧೫೩) ಶ್ರೀ ಮಾಲೀಕಯ್ಯ, ವಿ. ಗುತ್ತೇದಾರ್(ಅಫಜಲ್‌ಪುರ).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಬರಗಾಲ ಪರಿಹಾರ ಕಾಮಗಾರಿ ಕೆಲಸದಲ್ಲಿ ಅಫಜಲ್‌ಪುರ ತಾಲ್ಲೂಕಿಗೆ ಮಾಡಿದ ಖರ್ಚು ಎಷ್ಟು(ಇಲಾಖಾವಾರು ವಿವರಗಳನ್ನೊದಗಿಸುವುದು)

ಆ) ಈ ಎಲ್ಲಾ ಕಾಮಗಾರಿಗಳಿಗಾಗಿ ಮಾಡಿದ ಖರ್ಚನ್ನು ಪಾವತಿ ಮಾಡಲಾಗಿದೆಯೇ ಹಾಗಿಲ್ಲದಿದ್ದಲ್ಲಿ ಬಾಕಿ ಉಳಿದಿರುವ ಹಣ ಎಷ್ಟು ಹಾಗೂ ಇದನ್ನು ಯಾವಾಗ ಪಾವತಿ ಮಾಡುವಿರಿ ?

ಇ) ಕಳೆದ ವರ್ಷದಂತೆ ಈ ವರ್ಷವೂ ಮಳೆ ಬಾರದೆ ರೈತರು ದನಕರುಗಳಿಗೆ ಮೇವು ತರಲು ಸರಕಾರದಿಂದ ವಾಹನ ಸೌಕರ್ಯ ಕೇಳುತ್ತಿರುವುದು ಸರಕಾರದವರಿಗೆ ತಿಳಿದಿದೆಯೇ ?

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರಕಾರದವರು ಸಹಾಯ ಮಾಡುವರೆ ?

ಶ್ರೀ ಎಸ್. ಬೊಮ್ಮಾಯಿ(ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು).—

ಅಫಜಲಪುರ ತಾಲ್ಲೂಕಿನಲ್ಲಿ ಬರಪರಿಹಾರ ಕಾಮಗಾರಿಗಾಗಿ ೧೯೮೫-೮೬ನೇ ಸಾಲಿನಲ್ಲಿ ೩೨.೭೦೮ ಲಕ್ಷ ರೂಪಾಯಿಗಳನ್ನು ಹಾಗೂ ೧೯೮೬-೮೭ನೇ ಸಾಲಿನಲ್ಲಿ ೨೭.೦೦೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇಲಾಖಾವಾರು ಖರ್ಚು ಮಾಡಿದ ವಿವರ ಈ ಕೆಳಕಂಡಂತಿದೆ.

(ಲಕ್ಷ ರೂ. ಗಳಲ್ಲಿ)

	ಇಲಾಖೆ	೧೯೮೫-೮೬	೧೯೮೬-೮೭
೧.	ಲೋಕೋಪಯೋಗಿ	೧೨.೧೯೦	೮.೩೧೫
೨.	ವಿಶೇಷ ಸಣ್ಣ ನೀರಾವರಿ	೦.೩೮೮	೦.೪೩೨
೩.	ಭೂಸಾರಸಂರಕ್ಷಣೆ	೫.೪೦೦	೫.೫೦೦
೪.	ಭೂ ಸೇನಾನಿಗಮ	೬.೦೦೦	೨.೩೮೦
೫.	ಕ್ಷೇತ್ರಾಭಿವೃದ್ಧಿ ಅಧಿಕಾರಿ	೮.೭೩೦	೮.೦೦೩
೬.	ಅರಣ್ಯ	—	೨.೩೭೭
	ಒಟ್ಟು	೩೨.೭೦೮	೨೭.೦೦೭

ಆ) ಅಫಜಲಪುರ ತಾಲ್ಲೂಕಿನಲ್ಲಿ ತೆಗೆದುಕೊಂಡ ಬಹುತೇಕ ಬರಪರಿಹಾರ ಕಾಮಗಾರಿಗಳ ಖರ್ಚನ್ನು ಪಾವತಿ ಮಾಡಲಾಗಿದೆ. ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ ಮಾತ್ರ